ದಿನಾಂಕ **26.10.2016** ರಂದು **ಬೆಳಿಗ್ಗೆ 11.00 ಘಂಟೆಗೆ** ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣ ಇಂಧನ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆಯ ನಡವಳಿಗಳು.

**ಹಾಜರಾದ ಅಧಿಕಾರಿಗಳ ಪಟ್ಟಿ ಲಗತ್ತಿಸಿದೆ.**

ನಿರ್ದೇಶಕರು(ಗ್ರಾಮೂಸೌ-2) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ಸಭೆಗೆ ಹಾಜರಾದ ಜಿಲ್ಲಾ ಪಂಚಾಯತ್‌ನ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರರನ್ನು ಸಭೆಗೆ ಸ್ವಾಗತಿಸಿದರು.

**1. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ:**

1. ಮೊಟ್ಟಮೊದಲು ನಿರ್ದೇಶಕರು(ಗ್ರಾಮೂಸೌ-2) ರವರು ಚಿಕ್ಕಬಳ್ಳಾಪುರ ಮತ್ತು ಬೀದರ್ ಜಿಲ್ಲೆಯಲ್ಲಿ ಸಾಧಿಸಿದ ಪ್ರಗತಿಗೆ ಈ ಜಿಲ್ಲೆಗಳ ಯೋಜನಾ ಅಭಿಯಂತರರನ್ನು ಶ್ಲಾಘಿಸಿದರು.
2. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ **2016-17ನೇ** ಸಾಲಿನ ಸೆಪ್ಟೆಂಬರ್ **2016**ರವರೆಗಿನ ಪ್ರಗತಿ ವರದಿನ್ನು ವಿವರವಾಗಿ ಪರಿಶೀಲಿಸಿದಾಗ ಬಹುತೇಕ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು, ನಿಗದಿಪಡಿಸಿದ ಭೌತಿಕ ಗುರಿಯನ್ನು **ಜನವರಿ/ ಫೆಬ್ರವರಿ 2017**ರ ಅಂತ್ಯಕ್ಕೆ ಪೂರ್ಣಗೊಳಿಸುವುದಾಗಿ ಸಭೆಯ ಗಮನಕ್ಕೆ ತಂದರು.
3. ಬಳ್ಳಾರಿ, ಚಾಮರಾಜನಗರ, ದಕ್ಷಿಣ ಕನ್ನಡ, ಧಾರವಾಡ, ಕೊಡಗು, ಕೋಲಾರ, ಕೊಪ್ಪಳ, ರಾಯಚೂರು ಮತ್ತು ಉಡುಪಿ ಜಿಲ್ಲಾ ಪಂಚಾಯತ್‌ಗಳು ಶೂನ್ಯ ಪ್ರಗತಿ ಸಾಧಿಸಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ, ಕೂಡಲೇ ಪ್ರಗತಿ ಸಾಧಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.
4. ಹಾಗೂ ಕಾರ್ಯಕ್ರಮದ ಅನುಷ್ಠಾನ ಹಿತದೃಷ್ಟಿಯಿಂದ ಪ್ರಗತಿ ಸಾಧಿಸಲು ಸ್ಥಳೀಯವಾಗಿ ಎದುರಿಸುತ್ತಿರುವ ತೊಂದರೆಗಳ ಪರಿಣಾಮ ನಿಗದಿ ಪಡಿಸಿದ ಗುರಿಯನ್ನು ಹಿಂಪಡೆದು ಪ್ರಗತಿ ಸಾಧಿಸುವ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡುವ ಕುರಿತು ಚರ್ಚಿಸಲಾಗಿದ್ದು, ಗುರಿಯ ಬೇಡಿಕೆ ಹಾಗೂ ಮರು ಹಂಚಿಕೆ ಕುರಿತಂತೆ **ಡಿಸೆಂಬರ್ 2016ರೊಳಗೆ** ಸಕಾರಣಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಯಿತು.
5. **31ನೇ ಡಿಸೆಂಬರ್ 2016ರೊಳಗೆ** ಕಾರ್ಯಕ್ರಮದಡಿ ನಿಗದಿ ಪಡಿಸಿದ ಭೌತಿಕ ಗುರಿಯನ್ನು ಪೂರ್ಣ ಪ್ರಮಾಣದಲ್ಲಿ ಕಡ್ಡಾಯವಾಗಿ ಸಾಧಿಸಲು ಕ್ರಮಕೈಗೊಳ್ಳುವಂತೆ ತಿಳಿಸಲಾಯಿತು.
6. ಕಾರ್ಯಕ್ರಮದ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ ಸರ್ಕಾರೇತರ ಸಂಸ್ಥೆ, ಸ್ತ್ರೀ ಶಕ್ತಿ ಸಂಘ, ಯುವಕ/ಯುವತಿ ಮಂಡಳಿ, ಸ್ವ ಸಹಾಯ ಗುಂಪುಗಳನ್ನು ಪಾಲ್ಗೊಳ್ಳುವಂತೆ ಅರಿವು ಮತ್ತು ತಿಳುವಳಿಕೆ ಮೂಡಿಸಲು ಸೂಕ್ತ ಕ್ರಮಕೈಗೊಳ್ಳುವುದು ಹಾಗೂ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿರವರು ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ಪ್ರಗತಿ ಪರಿಶೀಲನೆ ಮಾಡಬೇಕು.
7. ಸ್ಥಳೀಯವಾಗಿ ಅಸ್ತಿತ್ವದಲ್ಲಿರುವ ಹಾಲಿನ ಕೇಂದ್ರಗಳನ್ನು ಗುರುತಿಸಿ, ಈ ಕೇಂದ್ರಗಳಿಂದ ಫಲಾನುಭವಿಗಳ ವಿವರಗಳನ್ನು ಪಡೆದು ಕಾರ್ಯಕ್ರಮವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಸಹಕಾರಿಯಾಗುವಂತೆ ಹಾಲಿನ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರನ್ನು ಕೋರುವಂತೆ ತೀರ್ಮಾನಿಸಲಾಯಿತು.
8. Inclusion of NBMMP under Direct Benefit Transfer ಈ ವಿಷಯವು National Policy ಗೆ ಸಂಬಂಧಿಸಿದ್ದಾಗಿದೆ. ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಟರ್ನ ಕೀ ಏಜನ್ಸಿಯವರು ಪ್ರಮುಖ ರೂವಾರಿಯಾಗಿದ್ದು, ಘಟಕ ನಿರ್ಮಿಸುವಲ್ಲಿ ಘಟಕಕ್ಕೆ ತಗಲುವ ಅಂದಾಜು ವೆಚ್ಚವನ್ನು ಫಲಾನುಭವಿಗಳು ಭರಿಸಲು ಅಶಕ್ತರಾಗಿರುವುದರಿಂದ ಘಟಕಗಳನ್ನು ನಿರ್ಮಿಸಿಕೊಳ್ಳಲು ಆಸಕ್ತಿ ತೋರುವುದಿಲ್ಲ. ಇದರಿಂದಾಗಿ ಕಾರ್ಯಕ್ರಮದ ಪ್ರಗತಿ ದಕ್ಕೆಯುಂಟಾಗುವುದರಿಂದ ಕಾರ್ಯಕ್ರಮದ ಪ್ರಗತಿಯ ಹಿತದೃಷ್ಟಿಯಿಂದ ಟರ್ನ ಕೀ ಏಜನ್ಸಿಯವರು ಘಟಕ್ಕೆ ತಗಲುವ ಅಂದಾಜು ವೆಚ್ಚದ ಪೈಕಿ

ಸರ್ಕಾರದಿಂದ ನಿಗದಿಪಡಿಸಲಾದ ಕೇಂದ್ರ ಹಾಗೂ ರಾಜ್ಯ ಸಹಾಯಧನವನ್ನು ಟರ್ನ ಕೀ ಏಜನ್ಸಿಯವರೇ ಮೊದಲಿಗೆ ಭರಿಸಿ ಇದಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ದೃಢೀಕರಣಗೊಂದಿಗೆ ಟರ್ನ ಕೀ ಏಜನ್ಸಿಯವರಿಗೆ ನೀಡಲಾಗುತ್ತಿದೆ. ಈ ವಿಷಯವನ್ನು ಈಗಾಗಲೇ ದಕ್ಷಿಣ ಪ್ರಾಂತೀಯ ರಾಜ್ಯಗಳ NBMMP ಪರಿಶೀಲನಾ ಸಭೆಯನ್ನು ನಿರ್ದೇಶಕರು, MNRE ರವರಿಗೆ ಗಮನಕ್ಕೆ ತರಲಾಗಿದೆ ಎಂದು ನಿರ್ದೇಶಕರು(ಗ್ರಾಮೂಸೌ-2) ರವರು ಸಭೆಯ ಗಮನಕ್ಕೆ ತಂದರು.

9. ತ್ರೈಮಾಸಿಕ ಪ್ರಗತಿ ವರದಿಗಳನ್ನು ನಿಗದಿತ ನಮೂನೆ ಹಾಗೂ ಕಾಲಮಿತಿಯಲ್ಲಿ ಸಲ್ಲಿಸಲು ತಿಳಿಸಲಾಯಿತು.
10. ಶ್ರೀ ಎಂ, ಎಸ್. ಸುದರ್ಶನ್, ಯೋಜನಾ ಅಭಿಯಂತರರು, ಜಿಲ್ಲಾ ಪಂಚಾಯತ್ ಬೆಂಗಳೂರು(ಗ್ರಾ) ರವರು ಪ್ರಗತಿ ಮತ್ತು ಫಲಾನುಭವಿಗಳ ವಿವರಗಳನ್ನು ಇಂಧೀಕರಿಸುವ ಕುರಿತಂತೆ ಒಂದು Laptop ಅಗತ್ಯತೆ ಇರುವುದಾಗಿ ತಿಳಿಸಿದ್ದು, ಈ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಬೆಂಗಳೂರು(ಗ್ರಾ)ರವರು ಸೂಕ್ತ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.
11. **2017-18** ರಿಂದ **2021-22**ನೇ ಸಾಲಿಗೆ ಸಂಬಂಧಿಸಿದಂತೆ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ಕ್ರೋಢಿಕರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.
12. ಕಾರ್ಯಕ್ರಮದ ಮೌಲ್ಯಮಾಪನ ಕುರಿತಂತೆ ಸರ್ಕಾರದ ಮಟ್ಟದಲ್ಲಿ ತೀರ್ಮಾನಿಸಿ ಕ್ರಮವಹಿಸಲಾಗುವುದೆಂದು ನಿರ್ದೇಶಕರು(ಗ್ರಾಮೂಸೌ-2) ತಿಳಿಸಿದರು.
13. NBMMP ಕಾರ್ಯಕ್ರಮದಡಿ ಬೆಳಗಾವಿ ಜಿಲ್ಲೆಗೆ ಹೆಚ್ಚಿನ ಗುರಿಯನ್ನು ನಿಗದಿಪಡಿಸಿ ಅನುಷ್ಠಾನಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತ್‌ನ ಯೋಜನಾ ಅಭಿಯಂತರರಿಗೆ ಇನ್ನಿತರೆ ಯೋಜನೆಗಳ ಹೆಚ್ಚುವರಿ ಪ್ರಭಾರವನ್ನು ಮುಂದಿನ ಆದೇಶದವರೆಗೆ ವಹಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ರವರು ಸೂಕ್ತ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.
14. ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ(MGNREGA) ಮಾರ್ಗಸೂಚಿ ಹಾಗೂ NBMMP ಮಾರ್ಗಸೂಚಿಯ ಧ್ಯೇಯೋದ್ದೇಶಗಳನ್ವಯ MGNREGA ಸಹಭಾಗಿತ್ವದೊಂದಿಗೆ (Convergence) ಕಾರ್ಯಕ್ರಮದ ಅನುಷ್ಠಾನವನ್ನು ಕೈಗೊಳ್ಳಲು MGNREGA, NBMMP ಹಾಗೂ ಫಲಾನುಭವಿಗಳ ವಂತಿಗೆ ಕುರಿತಂತೆ ಕಾಮಗಾರಿವಾರು ವಿವರಗಳನ್ನು ನೀಡುವಂತೆ ನಾಲ್ಕು ತಂಡಗಳಿಗೆ ಸೂಚಿಸಿದ್ದರ ಮೇರೆಗೆ ನಾಲ್ಕು ತಂಡಗಳ ಅಭಿಪ್ರಾಯಗಳನ್ನು ಪರಿಗಣಿಸಿ ಮೊದಲ ತಂಡದ Leader ಶ್ರೀ ಶಿವಣ್ಣ ಯೋಜನಾ ಅಭಿಯಂತರರು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ರವರು ನೀಡಿದ ತಾಂತ್ರಿಕ ವರದಿಯನ್ವಯ ಆದೇಶ ಹೊರಡಿಸಲು ತೀರ್ಮಾನಿಸಲಾಯಿತು.
15. MGNREGA ಸಹಭಾಗಿತ್ವದೊಂದಿಗೆ 3 ಘನ ಮೀಟರ್ ಸಾಮರ್ಥ್ಯದ ಧೀನಬಂಧು ಮಾದರಿಯ ಜೈವಾನಿಲ ಘಟಕಕ್ಕೆ ಅಂದಾಜು ಮೊತ್ತವನ್ನು ನಿಗದಿಪಡಿಸಿದೆ. ಆದರೆ ಗ್ರಾಮೀಣ ಜನತೆಯು ಸಾಮಾನ್ಯವಾಗಿ 2 ಘನ ಮೀಟರ್ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಲು ಇಚ್ಛಿಸುವುದರಿಂದ 2 ಘನ ಮೀಟರ್ ಸಾಮರ್ಥ್ಯದ ಧೀನಬಂಧು ಹಾಗೂ KVIC ಮಾದರಿಯ ಘಟಕಗಳನ್ನು ನಿರ್ಮಿಸಲು Model Estimateನೊಂದಿಗೆ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.

**2. ನೂತನ ಸೌರ ಬೆಳಕು ಯೋಜನೆ :**

1. 2015-16ನೇ ಸಾಲಿಗೆ ಸಂಬಂಧಿಸಿದಂತೆ ಯೋಜನೆಯಡಿ **ಬಾಗಲಕೋಟೆ ಮತ್ತು** ಮಂಡ್ಯ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು ಕೂಡಲೇ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದಾಗಿ ತಿಳಿಸಿದರು
2. 2016-17ನೇ ಸಾಲಿನಲ್ಲಿ ಯೋಜನೆಯಡಿ ಆಯ್ಕೆಯಾದ ಪ್ರಾಯೋಗಿಕ ಜಿಲ್ಲೆಗಳಲ್ಲಿ ಪ್ರಾಥಮಿಕ ಚಟುವಟಿಕೆಗಳನ್ನು ಕೈಗೊಂಡಿದ್ದು, **ಡಿಸೆಂಬರ್ 2016**ರೊಳಗೆ ಸೌರ ಬೀದಿ ದೀಪಗಳನ್ನು ಅಳವಡಿಕೆ ಮತ್ತು ಕಾರ್ಯಾಚರಣೆಯನ್ನು ಪೂರ್ಣಗೊಳಿಸುವಲ್ಲಿ ಮುಖ್ಯ **ಕಾರ್ಯನಿರ್ವಾಹಕ ಅಧಿಕಾರಿಗಳು,** ಜಿಲ್ಲಾ ಪಂಚಾಯತ್ ರವರು ಸೂಕ್ತ ಕ್ರಮಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

3. **2014–15** ರಿಂದ **2015–16ನೇ** ಸಾಲಿನವರೆಗೆ ನೂತನ ಸೌರಬೆಳಕು ಯೋಜನೆಯಡಿ ಅಳವಡಿಸಲಾದ ಸೌರ ಬೀದಿ ದೀಪಗಳ ಕಾರ್ಯಕ್ಷಮತೆ ಕುರಿತಂತೆ ಬಳ್ಳಾರಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿದಲ್ಲಿ **ಮೈಸೂರು, ಬಾಗಲಕೋಟೆ ಗದಗ, ಹಾವೇರಿ ಮತ್ತು ಮಂಡ್ಯ** ಜಿಲ್ಲಾ ಪಂಚಾಯತ್‌ಗಳಿಂದ ನಿಗದಿತ ನಮೂನೆಯಲ್ಲಿ ಮಾಹಿತಿ ಸಲ್ಲಿಸಿರುವುದಿಲ್ಲ. ಈ ಕುರಿತು ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ ಮುಖ್ಯ **ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮವಹಿಸಲು ತೀರ್ಮಾನಿಸಲಾಯಿತು.**

4. Non-SDP ಗೆ ಸಂಬಂಧಿಸಿದಂತೆ **ಬಾಗಲಕೋಟೆ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಗದಗ, ಹಾವೇರಿ, ಕೋಲಾರ, ರಾಯಚೂರು, ಉಡುಪಿ ಮತ್ತು ಯಾದಗಿರಿ** ಜಿಲ್ಲಾ ಪಂಚಾಯತ್‌ಗಳಿಂದ ಇದುವರೆವಿಗೂ ಮಾಹಿತಿ ಸಲ್ಲಿಸದೇ ಇರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ, ವಿಷಯದ ಗಂಭೀರತೆಯನ್ನು ಮನಗಂಡು ತಕ್ಷಣ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮವಹಿಸುವುದು.**

5. **2010–11ನೇ** ಸಾಲಿನಲ್ಲಿ ಸೌರ ಬೆಳಕು ಯೋಜನೆಯಡಿ ರಾಯಚೂರು ಜಿಲ್ಲೆಯಲ್ಲಿನ ಪ್ರಾಯೋಗಿಕ ಗ್ರಾಮಗಳಲ್ಲಿ ಅಳವಡಿಸಲಾದ ಸೌರ ಬೀದಿ ದೀಪಗಳ ದುರಸ್ಥಿ ಕುರಿತಂತೆ ಮರು ಪರಿಶೀಲನಾ ವರದಿಯನ್ನು ಕೂಡಲೇ ಸಲ್ಲಿಸುವುದು. ತಪ್ಪಿದಲ್ಲಿ ಈ ಪ್ರಕರಣವು **5 ವರ್ಷಗಳ ಮೇಲ್ಪಟ್ಟಿದ್ದಾಗಿದ್ದು,** ಇ–ಟೆಂಡರ್‌ನ ನಿಯಮಾವಳಿಯನ್ವಯ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಯಾವುದೇ ಕ್ರಮವಿರುವುದಿಲ್ಲವೆಂದು ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತೀರ್ಮಾನಿಸಲಾಯಿತು.

6. ಕಲಬುರಗಿ ಜಿಲ್ಲೆಯಲ್ಲಿ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದ ಬ್ಯಾಂಕ್ ಖಾತೆಯಲ್ಲಿ ಬಾಕಿ ಉಳಿದ **ರೂ.25.31ಲಕ್ಷಗಳನ್ನು** ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ವಿನಿಯೋಗಿಸಲಾಗಿದೆ ಎಂದು ಯೋಜನಾ ಅಭಿಯಂತರರು ಕಲಬುರಗಿ ರವರು ಸಭೆಗೆ ತಿಳಿಸಿದರು. ಆದರೆ **2007–08ನೇ** ಸಾಲಿನಿಂದ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮವು ಸ್ಥಗಿತಗೊಂಡಿದ್ದು, ಈ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನವನ್ನು ಸರ್ಕಾರದ ಪೂರ್ವಾನುಮತಿ ಪಡೆಯದೇ ಮಾರ್ಗಪಲ್ಲಟ ಮಾಡಿರುವುದು ನಿಯಮಾವಳಿ / ಮಾರ್ಗಸೂಚಿಯನ್ನು ಉಲ್ಲಂಘಿಸಿದಂತಾಗಿದೆ. ಆದ್ದರಿಂದ ಉದ್ದೇಶಿತ ಯೋಜನೆಗೆ ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಯೋಜನೆಗೆ ವಿನಿಯೋಗಿಸಬೇಕಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದಡಿ ಬಾಕಿ ಇರುವ **ರೂ.25.31ಲಕ್ಷಗಳನ್ನು** ಸರ್ಕಾರಕ್ಕೆ ಹಿಂದಿರುಗಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಕಲಬುರಗಿ ರವರು ಕ್ರಮ ವಹಿಸುವಂತೆ ತೀರ್ಮಾನಿಸಲಾಯಿತು.

7. LA & LC ಗಳಿಗೆ ಉತ್ತರಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸುವುದು.

8. ನೂತನ ಸೌರಬೆಳಕು ಯೋಜನೆಯನ್ನು ಹೆಚ್ಚಿನ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಕೇಂದ್ರಿಯ ಸೌರ ಘಟಕಗಳ ಮೂಲಕ ಅಳವಡಿಸಲಾದ ಸೌರ ಬೀದಿ ದೀಪಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ಅನುಕೂಲ ಮತ್ತು ಪ್ರತಿಕೂಲಗಳ ಕುರಿತಂತೆ ಪ್ರಾಯೋಗಿಕ ಜಿಲ್ಲೆಗಳ ಯೋಜನಾ ಅಭಿಯಂತರರು, KREDL ಮತ್ತು MNRE ಅನುಮೋದಿತ ಚಾನೆಲ್ ಪಾರ್ಟನರ್‌ಗಳೊಂದಿಗೆ ಚರ್ಚಿಸಿ ಈ ಕೆಳಗಿನಂತೆ ತೀರ್ಮಾನಿಸಲಾಯಿತು.

   - Centralised Solar power plant Capacity Design ಮಾಡುವಾಗ 10–20% Transmission losses, Cable losses, Resistance losses..etc ಒಳಗೊಂಡಂತೆ ಪರಿಗಣಿಸುವುದು.
   - Shadow free site ಆಯ್ಕೆ ಮಾಡುವುದು.
   - ಸದರಿ plant, current power generation ಮಾಡುವುದರಿಂದ accident ತಪ್ಪಿಸಲಿ ಎಚ್ಚರಿಕೆ ಕ್ರಮ ವಹಿಸುವುದು.

- General insurance ಮಾಡಿಸುವುದು ಹಾಗೂ ಅದಕ್ಕಾಗಿ ಅನುದಾನವನ್ನು ಮಿಸಲಿರಿಸುವುದು. ಈ ಉದ್ದೇಶದಿಂದ Electrical Liecenced Contracter ಅವರೊಂದಿಗೆ *LED ಸೌರ ಶಕ್ತಿ ಬೀದಿ ದೀಪಗಳನ್ನು ಬೆಳಗಿಸಲು* Centralized Solar power plant ತಯಾರಕರು ಮತ್ತು ಸರಬರಾಜುದಾರರು ಕಡ್ಡಾಯವಾಗಿ MOU/Agreement ಮಾಡಿಕೊಳ್ಳುವುದು / *LED ಸೌರಶಕ್ತಿ ಬೀದಿ ದೀಪಗಳನ್ನು ಬೆಳಗಿಸಲು* Centralised Solar power plant ತಯಾರಕರು ಮತ್ತು ಸರಬರಾಜುದಾರರು Electrical Liecence ಹೊಂದಿರಬೇಕು.
- Centralised Solar power plant ನಲ್ಲಿ Power ಉತ್ಪಾದನೆ ತಿಳಿಯಲು ಸರ್ಕಾರದ ESCOS ಅನುಮೋದಿತ Energy meter ಅಳವಡಿಸುವುದು.
- ಯೋಜನೆಯ ಅನುಷ್ಠಾನದಲ್ಲಿ ಗುಣಮಟ್ಟದ ಪರಿಶೀಲನೆಗಾಗಿ MNRE ಅನುಮೋದಿತ ಪರೀಕ್ಷಾ ಕೇಂದ್ರಗಳು CPRI/ETDC Etc ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿರುವ MGIRED, ಜಕ್ಕೂರು, ಬೆಂಗಳೂರು / KSCST Energy cell -I.I.SCIENCE ಬೆಂಗಳೂರು Etc ಅಥವಾ ಸರ್ಕಾರದ ಅನುಮೋದಿತ ಇಂಜಿನಿಯರಿಂಗ್ ಕಾಲೇಜ್‌ಗಳಿಂದ Third party inspection report ನೊಂದಿಗೆ ಕಡ್ಡಾಯವಾಗಿ ಖಾತ್ರಿ ಪಡಿಸಿಕೊಳ್ಳುವುದು.
- ಯೋಜನೆಯ ಅನುಷ್ಠಾನದ ನಂತರ Complaint log Bookಯನ್ನು ಗ್ರಾಮ ಪಂಚಾಯತಿಯಲ್ಲಿ ಕಡ್ಡಾಯವಾಗಿ ಇಡುವುದು. ಅದನ್ನು ಕನಿಷ್ಠ 15 ದಿನಗಳಿಗೊಮ್ಮೆ Project Engineer IREP ಸರಬರಾಜುದಾರರು ಅವರು ಪರಿಶೀಲಿಸಿ ನೋಡಿದ್ದೇನೆ ಎಂದು ಸಹಿ ಮಾಡುವುದು. Complaint log Book ನಲ್ಲಿ ಏನಾದರೂ ದೂರುಗಳಿದ್ದಲ್ಲಿ, CEO ZP ರವರಿಗೆ ವರದಿ ಮಾಡುವುದು ಹಾಗೂ ಉಪಕರಣಗಳ ಸರಬರಾಜುದಾರರು ದೂರುಗಳಲ್ಲಿನ ವಿವರಗಳನ್ನು ಪರಿಶೀಲಿಸಿ ದುರಸ್ತಿ ನಿರ್ವಹಣೆ ಕೈಗೊಂಡ ಕುರಿತಂತೆ ಸರಬರಾಜುದಾರರು ಮತ್ತು ಯೋಜನಾ ಅಭಿಯಂತರರು ನಿರ್ವಹಣೆ ಕೈಗೊಂಡ ಕುರಿತು Complaint log Book ನಲ್ಲಿ ದೃಡೀಕರಿಸಿಬೇಕು. *LED ಸೌರಶಕ್ತಿ ಬೀದಿ ದೀಪಗಳನ್ನು ಬೆಳಗಿಸಲು* Centralised Solar power plant ತಯಾರಕರು ಮತ್ತು ಸರಬರಾಜುದಾರರು Project Engineer IREP ರವರೊಂದಿಗೆ ಸಮನ್ವಯ ಸಾಧಿಸುವುದು.
- ಗ್ರಾಮ ಪಂಚಾಯತಿಗಳಲ್ಲಿ ಬೀದಿ ದೀಪ ಮತ್ತು ಕುಡಿಯುವ ನೀರಿನ ನಿರ್ವಹಣೆಗೆ ಹೆಚ್ಚಿನ ಹಣ ಖರ್ಚಾಗುತ್ತಿದೆ. ಅದಕ್ಕೆ KRESMA ಪ್ರತಿನಿಧಿಗಳು ಈಗಾಗಲೇ ರಾಜ್ಯದಲ್ಲಿ ಬೀದಿ ದೀಪಗಳಿಗೆ Centralised Solar power plant ಅನುಷ್ಠಾನವಾಗಿದ್ದು, ಅವುಗಳ ಯಶೋಗಾದೆ ಬಗ್ಗೆ Documentary ಮಾಡಿಸಿ MNRE Govt. of India ಅವರಿಗೆ ಸಲ್ಲಿಸಿ ಯೋಜನೆಗೆ ಸಹಾಯಧನ ಪಡೆಯಬಹುದು, ಇದರಿಂದ ರಾಜ್ಯದ ಇತರೆ ಜಿಲ್ಲೆಗಳಿಗೆ ಯೋಜನೆಯನ್ನು ವಿಸ್ತರಿಸಬಹುದೆಂದು ತಿಳಿಸಿದರು.
- KRESMA ದ ಬಹುತೇಕ ಸೌರಶಕ್ತಿ ಇಂಧನ ಉಪಕರಣ ತಯಾರಕರು MNRE Govt. of India Business Channel Partner ಇದ್ದು ಸಹಾಯಧನ ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತೀರ್ಮಾನಿಸಲಾಯಿರು.

—

* ಯೋಜನೆ ಅನುಷ್ಠಾನವಾದ ನಂತರ 5 ವರ್ಷಗಳು LED ಸೌರಶಕ್ತಿ ಬೀದಿ ದೀಪಗಳನ್ನು ಬೆಳಗಿಸಲು Centralised Solar power plant ತಯಾರಕರು ಮತ್ತು ಸರಬರಾಜುದಾರರು Service & Maintenance ಒದಗಿಸುತ್ತಿದ್ದು, ತದನಂತರ ಗ್ರಾಮ ಪಂಚಾಯತಿಗೆ ಈ ಉಪಕರಣವನ್ನು ಹಸ್ತಾಂತರಿಸುವುದು ಹಾಗೂ ಈ ಉಪಕರಣದ AMC ಗಾಗಿ ಗ್ರಾಮ ಪಂಚಾಯತಿಯು ವಾರ್ಷಿಕವಾಗಿ ಅನುದಾನವನ್ನು ತೆಗೆದಿರಿಸಿಕೊಳ್ಳಲು ತೀರ್ಮಾನಿಸಲಾಯಿತು ಹಾಗೂ AMC ಯನ್ನು ಮುಂದುವರಿಸುವ ಕುರಿತಂತೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.
* ನೂತನ ಸೌರ ಬೆಳಕು ಯೋಜನೆಯ ಪ್ರಾಯೋಜನವನ್ನು ಬೆಂಗಳೂರು(ನ), ಬೆಂಗಳೂರು(ಗ್ರಾ), ಹಾಸನ ಹಾಗೂ ಇನ್ನಿತರೆ ಜಿಲ್ಲೆಗಳಿಗೂ ವಿಸ್ತರಿಸಲು ಕ್ರಮವಹಿಸುವಂತೆ ತಿಳಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

(ಎನ್. ಕೃಷ್ಣಪ್ಪ ಕೋಡಿಹಾಳ್ಳ)
ನಿರ್ದೇಶಕರು(ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸಂಖ್ಯೆ:ಗ್ರಾಅಪ:85ಜೈಅಯೋ:2016 ದಿನಾಂಕ: 09.11.2016

1. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಯೋಜನಾ ಅಭಿಯಂತರರು(ಸಗ್ರಾಇಂಕಾ)

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪಂರಾಜ್ ಇಲಾಖೆ .
2. ನಿರ್ದೇಶಕರು (ಗ್ರಾಮೂಸೌ-2), ರವರ ಆಪ್ತ ಸಹಾಯಕರು, ಗ್ರಾಅಪಂರಾಜ್ ಇಲಾಖೆ.
3. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಅಪಂರಾಜ್ ಇಲಾಖೆ. 4. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ